ಪ್ರಜಾವಾಣಿ

ಜೈನ್ ವಿಶ್ವವಿದ್ಯಾಲಯದ ಘಟಿಕೋತ್ಸವ

# ಪೈಲಟ್ ಕನಸಿಗೆ ಬಂಗಾರದ 'ನಿಧಿ'




ಜೈನ್ ವಿಶ್ವವಿದ್ಯಾಲಯವು ಜಕ್ಕಸಂದ್ರದಲ್ಲಿರುವ ಗ್ಲೋಬಲ್ ಕ್ಯಾಂಪಸ್‌ನಲ್ಲಿ ಗುರುವಾರ ಆಯೋಜಿಸಿದ್ದ 3ನೇ ಘಟಿಕೋತ್ಸವ ಸಮಾರಂಭದಲ್ಲಿ ಚಿನ್ನದ ಪದಕ ಗಳಿಸಿದ ವಂಧ್ಯಾ, ನಯನಾ, ಅಪೂರ್ವ, ಎನ್.ಮನೀಶ್ ಜೈನ್, ಅಂಜು ಆನಂದ್, ಆಶೀಶ್‌ಕುಮಾರ್ ಹರ್ಷ ವ್ಯಕ್ತಪಡಿಸಿದ್ದು ಹೀಗೆ...

**ಪ್ರಜಾವಾಣಿ ವಾರ್ತೆ**

ಬೆಂಗಳೂರು: 'ನನಗೆ ಚಿಕ್ಕಂದಿನಿಂದಲೂ ಪೈಲಟ್ ಆಗಬೇಕೆಂಬ ಅಭಿಲಾಷೆ. ಎಲ್ಲರೂ ಆಗಸದಲ್ಲಿರುವ ನಕ್ಷತ್ರಗಳನ್ನು ಎಣಿಸಿದರೆ, ನಾನು ವಿಮಾನ ಹಾರಾಟವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಸದ್ಯ ವಿಮಾನ ತಂತ್ರಜ್ಞಾನದಲ್ಲಿ ಎಂ.ಟೆಕ್ ಪದವಿ ಪಡೆದು ಉದ್ಯೋಗದ ನಿರೀಕ್ಷೆಯಲ್ಲಿದ್ದೇನೆ' ಎಂದು ಎಂ.ಟೆಕ್ ಪದವಿಯಲ್ಲಿ ಚಿನ್ನದ ಪದಕ ಗಳಿಸಿದ ಶ್ರೀನಿಧಿ ಸಿ.ಎಂ. ತಿಳಿಸಿದರು.

ಜೈನ್ ವಿಶ್ವವಿದ್ಯಾಲಯದ ಗ್ಲೋಬಲ್ ಕ್ಯಾಂಪಸ್‌ನಲ್ಲಿ ಗುರುವಾರ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ಅವರು ಕನಸುಗಳನ್ನು ಬಿಚ್ಚಿಟ್ಟರು.

'ನಿತ್ಯ 3 ಗಂಟೆಗಳ ಕಾಲ ಸತತವಾಗಿ ಅಭ್ಯಾಸ ಮಾಡುತ್ತಿದ್ದರ ಫಲವಾಗಿ ಉತ್ತಮ ಅಂಕ ಗಳಿಸಲು ಸಾಧ್ಯವಾಯಿತು. ನನ್ನ ಈ ಸಾಧನೆಗೆ ತಂದೆ ತಾಯಿಯೇ ಪ್ರೇರಣೆ' ಎಂದು ತಿಳಿಸಿದರು.

'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ ಈಗಾಗಲೇ ಅರ್ಜಿ ಸಲ್ಲಿಸಿದ್ದೇನೆ. ಸಾಧ್ಯವಾದರೆ ಗುಪ್ತಚರ ವಿಭಾಗಕ್ಕೆ ಸಹಾಯವಾಗುವ ರೀತಿಯಲ್ಲಿ ಸೂಕ್ಷ್ಮ ತಂತ್ರಜ್ಞಾನದ ವಿಮಾನ ಸಿದ್ಧಪಡಿಸುವ ಯೋಜನೆ ಇದೆ' ಎಂದು ತಿಳಿಸಿದರು.

ಎಂ.ಫಿಲ್‌ನಲ್ಲಿ ರ್‍ಯಾಂಕ್ ಪಡೆದ ಜೆ.ಮಾನಸ, 'ಗಣಿತವಿಜ್ಞಾನದಲ್ಲಿ ಉನ್ನತಮಟ್ಟದ ಸಾಧನೆ ಮಾಡಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದೇನೆ. ಜತೆಗೆ ಇದೇ ವಿಷಯದಲ್ಲಿ ಉಪನ್ಯಾಸಕಿ ಆಗುವ ಬಯಕೆ ಇದೆ. ಸಂಶೋಧನೆ ಮಾಡಲು ಪೂರ್ವ ತಯಾರಿಯಂತೆ ಎಂ.ಫಿಲ್ ಮಾಡಿದ್ದೇನೆ' ಎಂದು ತಿಳಿಸಿದರು.

ಪದವಿ, ಸ್ನಾತಕೋತ್ತರ ಪದವಿ ಹಾಗೂ ಸಂಶೋಧನಾ ವಿಭಾಗದಲ್ಲಿ 2,281 ವಿದ್ಯಾರ್ಥಿಗಳಿಗೆ ಪದವಿ ನೀಡಲಾಯಿತು. ಅಲ್ಲದೇ ವಿವಿಧ ವಿಷಯಗಳಲ್ಲಿ ರ್‍ಯಾಂಕ್ ಪಡೆದ 40 ವಿದ್ಯಾರ್ಥಿಗಳಿಗೆ ಚಿನ್ನದ ಪದಕವನ್ನು ಪ್ರದಾನ ಮಾಡಲಾಯಿತು.

ಪದವಿ ಪ್ರದಾನ ಮಾಡಿದ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ ಅಧ್ಯಕ್ಷ, ನಂದನ್ ನಿಲೇಕಣಿ, 'ಜೀವನದಲ್ಲಿ ದೊಡ್ಡ ಪ್ರಮಾಣದ ಸವಾಲನ್ನು ಸ್ವೀಕರಿಸುವ ಛಾತಿಯನ್ನು ಬೆಳೆಸಿಕೊಂಡಾಗ ಮಾತ್ರ ಉನ್ನತ ಮಟ್ಟಕ್ಕೆ ಏರಲು ಸಾಧ್ಯ' ಎಂದು ಅಭಿಪ್ರಾಯಪಟ್ಟರು.

'ನಿಚ್ಚಳವಾದ ಗುರಿ ಹಾಗೂ ಆತ್ಮವಿಶ್ವಾಸವಿದ್ದರೆ ಬದುಕಿನಲ್ಲಿ ಸಾಧನೆ ಮಾಡಬಹುದು. ಸಾಮಾನ್ಯ ಎಂಜಿನಿಯರ್ ಆಗಿ ದೊಡ್ಡ ಉದ್ಯಮವನ್ನೇ ಕಟ್ಟಿದ ಇನ್ಫೊಸಿಸ್ ನಾರಾಯಣ ಮೂರ್ತಿ ಅವರು ನನಗೆ ಸದಾ ಸ್ಫೂರ್ತಿ' ಎಂದು ತಿಳಿಸಿದರು.

'ಸೋಲಿನ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳಬೇಡಿ. ಉದಾತ್ತ ಚಿಂತನೆಗಳ ಜತೆಗೆ ಲಭ್ಯವಿರುವ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಕೌಶಲ ರೂಢಿಸಿಕೊಳ್ಳಿ' ಎಂದು ಸಲಹೆ ನೀಡಿದರು. ಜೈನ್ ವಿ.ವಿಯ ಕುಲಪತಿ ಡಾ.ಎನ್.ಸುಂದರರಾಜನ್ ಇತರರು ಉಪಸ್ಥಿತರಿದ್ದರು.

## ಪದವಿ ಪ್ರದಾನ

ಅಂಗವಿಕಲ ವಿದ್ಯಾರ್ಥಿ ಕೆ.ಜೆ.ಸುತೇಜಾ ಅವರಿಗೆ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ ಅಧ್ಯಕ್ಷ ನಂದನ್ ನಿಲೇಕಣಿ ಅವರು ಪದವಿ ಪ್ರದಾನ ಮಾಡಿದರು. ಕುಲಪತಿ ಎನ್. ಸುಂದರರಾಜನ್, ಜೈನ್ ಯೂನಿವರ್ಸಿಟಿ ಟ್ರಸ್ಟ್ ಅಧ್ಯಕ್ಷ ಚೆನ್‌ರಾಜ್ ರಾಯ್‌ಚಂದ್ ಭಾಗವಹಿಸಿದ್ದರು

